OS No. 124/2024 DW-1

**<u>ದಿನಾಂಕ 15.04.2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಪಿ ಡಿ ಪಿ ವಕೀಲರಿಂದಃ</u>**

12. ನಾನು ವಾದಿ ಕಡೆಯಿಂದ 4 ಲಕ್ಷ ಅಲ್ಲದೇ ಬೇರೆ ಸಾಲ ಪಡೆದಿಲ್ಲ. ನಿಡಿ-1 ಮತ್ತು ನಿಡಿ-2 ಒಂದೇ ಬ್ಯಾಂಕ್ ಖಾತೆಗೆ ಸಂಬಂಪಟ್ಟಿದ್ದವು ಎಂದರೆ ನಿಜ. ದಿಃ22.08.2022 ರಂದು ನಾನು ವಾದಿ ಕಡೆಯಿಂದ 3,40,000/- ನಗದು ಮತ್ತು ಅದೇ ತಿಂಗಳು 60,000/- ಗೂಗಲ್ ಪೇ ಮೂಲಕ ಪಡೆದಿರುತ್ತೇನೆ. ದಿಃ29.09.2022 ರಂದು ನಾನು ವಾದಿ ಕಡೆಯಿಂದ ರೂ.10,000/- ಗೂಗಲ್ ಪೇ ಮೂಲಕ ಪಡೆದಿರುತ್ತೇನೆ ಎಂದರೆ ನಿಜ. ದಿಃ10.01.2023 ರಂದು ನಾನು ವಾದಿ ಕಡೆಯಿಂದ ರೂ.10,000/- ಗೂಗಲ್ ಪೇ ಮೂಲಕ ಪಡೆದಿರುತ್ತೇನೆ ಎಂದರೆ ನಿಜ. ಈ ಮೇಲಿನ ವಿಚಾರದ ಬಗ್ಗೆ ನಾನು ದಾವಾದಲ್ಲಿ ತಿಳಿಸಿಲ್ಲ ಎಂದರೆ ಸಾಕ್ಷಿಯು ಈ ಮೊತ್ತವನ್ನು ನಾನು ಹಿಂದಿರುಗಿಸಿರುತ್ತೇನೆಂದು ತಿಳಿಸಿರುತ್ತಾರೆ. ಈ ವಿಷಯವನ್ನು ನಾನು ದಾವಾದಲ್ಲಿ ತಿಳಿಸಿಲ್ಲ ಎಂದರೆ ನಿಜ. ದಿಃ11.02.2023 ರಂದು ಸಾಕ್ಷಿ 2 ರವರ ಕಡೆಯಿಂದ ಸಾಲ ಪಡೆದು ವಾದಿಗೆ ರೂ.20,000/- ಗೂಗಲ್ ಪೇ ಮೂಲಕ ನೀಡಿರುತ್ತೇನೆ ಎಂದರೆ ನಿಜ. ದಿಃ25.05.2023 ರಂದು ಸಾಕ್ಷಿ 2 ರವರ ಕಡೆಯಿಂದ ಹಣ ಪಡೆದು ವಾದಿಗೆ ರೂ.5,000/- ಗೂಗಲ್ ಪೇ ಮೂಲಕ ನೀಡಿರುತ್ತೇನೆ ಎಂದರೆ ನಿಜ. ವಾದಿ ಜೊತೆ ಮಾಡಿರುವ ವ್ಯವಹಾರ ಮತ್ತು ಸಾಕ್ಷಿ 2 ರವರ ಜೊತೆ ಮಾಡಿರುವ ವ್ಯವಹಾರ ಬೇರೆ ಬೇರೆ ಎಂದರೆ ಸಾಕ್ಷಿಯು ವಾದಿಯ ಜೊತೆ ಬಿಟ್ಟು ಬೇರೆ ವ್ಯವಹಾರ ಮಾಡಿಲ್ಲ ಎಂದು ನುಡಿಯುತ್ತಾರೆ. ದಿಃ22.05.2023 ರಂದು ಸಾಕ್ಷಿ 2 ರವರಿಗೆ ರೂ.1,00,000/- ಗೂಗಲ್ ಪೇ ಮೂಲಕ ನೀಡಿರುತ್ತೇನೆ ಎಂದರೆ ಸಾಕ್ಷಿಯು ವಾದಿ ಹೇಳಿದ್ದರಿಂದ ಹಾಕಿರುತ್ತೇನೆಂದು ನುಡಿಯುತ್ತಾರೆ. ಈ ಮೇಲಿನ ವಿಷಯಗಳನ್ನು ದಾವಾದಲ್ಲಿ ತಿಳಿಸಿಲ್ಲ ಎಂದರೆ ಸಾಕ್ಷಿಯು ನನಗೂ ಮತ್ತು ಸಾಕ್ಷಿ 2 ರವರಿಗೂ ಯಾವುದೇ ವ್ಯವಹಾರ ಇರಲಿಲ್ಲ ಎಂದು ನುಡಿಯುತ್ತಾರೆ. ವಾದಿಯ ಹೇಳಿಕೆಯ ಮೇರೆಗೆ ಸಾಕ್ಷಿ2 ರವರ ಜೊತೆ ವ್ಯವಹಾರ ಮಾಡಿರುತ್ತೇನೆಂದು ದಾವಾದಲ್ಲಿ ತಿಳಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ.

13. ದಿಃ22.08.2022 ರಂದು ನಾನು ಸಾಲ ಪಡೆದೆ ಎಂದು ಹೇಳಲಾದ ದಿನ ಚೆಕ್ಕು ಮತ್ತು ಸ್ಟಾಂಪ್ ಪೇಪರ್ ಅನ್ನು ವಾದಿಯವರ ಮನೆಗೆ ಯಾರ ಹೇಳಿಕೆ ಮೇರೆಗೆ ತಂದಿರುತ್ತೀರಾ ಎಂದು ಕೇಳಿದಾಗ ಸಾಕ್ಷಿಯು ಚೆಕ್ ಅನ್ನು ವಾದಿ ತರಲು ತಿಳಿಸಿದ್ದರು ಎಂದು ನುಡಿಯುತ್ತಾರೆ. ನಾನು ನಿತಿನ್ ರಾಜ್ ಅಲಿಯಾಸ್ ಅರ್ಜುನ್ ರವರ ಮೂಲಕ ವಾದಿ ಕಡೆಗೆ ದಿಃ22.08.2022 ರಂದು ಹೋಗಿರುತ್ತೇನೆಂದರೆ ನಿಜ. ವಾದಿಯು ಸ್ವತಃ ಚೆಕ್ ಮತ್ತು ಸ್ಟಾಂಪ್ ಪೇಪರ್ ಅನ್ನು ಒತ್ತಾಯ ಮಾಡಿರಲಿಲ್ಲ ಎಂದರೆ ಸುಳ್ಳು. ದಿಃ28.08.2022, 19.10.2022, 04.01.2023, 24.03.2023 ರಲ್ಲಿ ನಾನು ವಾದಿ ಮನೆಗೆ ಹೋಗಿ ಹಣ ಪಡೆದುಕೊಂಡು ಬಂದಿರುತ್ತೇನೆಂದರೆ ಸುಳ್ಳು. ನಿಪಿ-5 ಒಪ್ಪಂದ ಪತ್ರದಲ್ಲಿ ನಾನೇ ನನ್ನ ಹಸ್ತಾಕ್ಷರದಲ್ಲಿ ಬರೆದು ವಾದಿ ಕಡೆಯಿಂದ ಸಾಲ ಪಡೆದು, ಚೆಕ್ಕು ಗಳನ್ನು ನೀಡಿ ಸ್ಟಾಂಪ್ ಪೇಪರ್ ಮೇಲೆ ಬರೆದು ಕೊಟ್ಟಿರುತ್ತೇನೆಂದರೆ ಸುಳ್ಳು. ಸಾಕ್ಷಿ ಮುಂದುವರೆದು ಖಾಲಿ ಪೇಪರ್ ಮೇಲೆ ಸಹಿ ಮಾಡಿರುತ್ತೇನೆಂದು ಹೇಳುತ್ತಾರೆ. ನಾನು ವಾದಿ ಕಡೆಯಿಂದ ಮಾಸಿಕವಾಗಿ ಶೇಕಡಾ 4 ರಂತೆ ಬಡ್ಡಿಗೆ ಹಣವನ್ನು ಸಾಲ ಪಡೆದಿರುತ್ತೇನೆ. ನಾನು ಸಾಲ ಪಡೆದ ಹಣ, ಬಡ್ಡಿ ಹಿಂದಿರುಗಿಸಿಲ್ಲ ಎಂದರೆ ಸಾಕ್ಷಿಯು ಬಡ್ಡಿಯನ್ನು ಕೆಲವೊಮ್ಮೆ ಮುಂಚಿತವಾಗಿ ಮತ್ತು ಕೆಲವೊಮ್ಮೆ ನಂತರ ಕೊಟ್ಟಿರುತ್ತೇನೆಂದು ನುಡಿಯುತ್ತಾರೆ. ವಾದಿ ಹಣವನ್ನು ಬಡ್ಡಿಗೆ ಕೊಟ್ಟಿರಲಿಲ್ಲ ಎಂದರೆ ಸುಳ್ಳು. ದಾವಾದಲ್ಲಿ ಬಡ್ಡಿ ಬಗ್ಗೆ ತಿಳಿಸಿಲ್ಲ ಎಂದರೆ ನಿಜ.

14. 2023 ರಲ್ಲಿ ನನ್ನ ಖಾತೆಯಲ್ಲಿ ಎಷ್ಟು ಹಣ ಇತ್ತು ಎಂದು ಗೊತ್ತಿಲ್ಲ. ದಿಃ29.12.2023 ರಲ್ಲಿ ನನ್ನ ಖಾತೆಯಲ್ಲಿ 1.32 ಪೈಸೆ ಹಣ ಇತ್ತು ಎಂದರೆ ನಿಜ. ನನಗೆ ಹಣ ವಾಪಸ್ಸು ಕೊಡುವ ಸಾಮರ್ಥ್ಯ ವಿಲ್ಲದಿದ್ದರೂ ಹಣ ಹಿಂದಿರುಗಿಸಿದ್ದೇನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸುಳ್ಳು. ವಾದಿ ಕಡೆಯಿಂದ ಸಾಲ ಪಡೆದು ಆಗಾಗ ನನ್ನಕೈಲಿ ಆದ ಹಾಗೆ ರೂ.2000/- 5000/-, 10000/-, 16000/-, 20000/- ಸ್ವಲ್ಪ ಸ್ವಲ್ಪ ಕೊಟ್ಟಿರುತ್ತೇನೆಂದರೆ ಸುಳ್ಳು. ದಾವಾ ಆಸ್ತಿ 35 ಲಕ್ಷಕ್ಕೆ ತೀರ್ಮಾನವಾಗಿತ್ತು ಎಂದರೆ ಸುಳ್ಳು. ಆದಾದ ನಂತರ ನಾನು ಹಿಂದಿರುಗಿಸಿದ ಹಣ ಒಟ್ಟು ಸೇರಿ 40 ಲಕ್ಷಕ್ಕೆ ದಾವಾ ಆಸ್ತಿ ತೀರ್ಮಾನವಾಗಿತ್ತು ಎಂದರೆ ಸುಳ್ಳು. ನಾನು ನಿಪಿ-5 ರಂತೆ 2 ಸಲ ರೂ. 10 ಲಕ್ಷ, ನಿಪಿ-6 ರಂತೆ ರೂ. 5ವರೆ ಲಕ್ಷ, ನಿಪಿ-1 ರಂತೆ ರೂ. 20 ಲಕ್ಷ, ಒಟ್ಟು 35 ವರೆ ಲಕ್ಷ ಪಡೆದಿರುತ್ತೇನೆಂದರೆ ಸುಳ್ಳು. ನಿಪಿ-1,5,6 ಅನ್ನು

ನಾನೇ ಮಾಡಿಕೊಟ್ಟಿರುತ್ತೇನೆಂದರೆ ಸುಳ್ಳು. ನಿಪಿ-20 ಮತ್ತು 21 ಅನ್ನು ಹಣ ಪಡೆಯುವಾಗ ವಾದಿ ಮನೆಯಲ್ಲಿ ತೆಗೆದಿರುತ್ತೇವೆಂದರೆ ಗೊತ್ತಿಲ್ಲ. ಒಂದೇ ಬ್ಯಾಂಕಿನ 4 ಚೆಕ್ಕುಗಳು ಮತ್ತು ಬೇರೆ ಬೇರೆ ಬ್ಯಾಂಕಿನ 3 ಚೆಕ್ಕುಗಳನ್ನು ವಾದಿಗೆ ಬೇರೆ ಬೇರೆ ದಿನಾಂಕದಂದು ವಾದಿಗೆ ಕೊಟ್ಟಿರುತ್ತೇನೆಂದರೆ ಸಾಕ್ಷಿಯು ಖಾಲಿ ಚೆಕ್ಕುಗಳನ್ನು ನೀಡಿರುತ್ತೇನೆಂದು ನುಡಿಯುತ್ತಾರೆ. ನಾನು ಸಾಕ್ಷಿ 2 ರವರ ಜೊತೆ ಬೇರೆ ವ್ಯವಹಾರ ಮತ್ತು ದಾವೆ ವ್ಯವಹಾರ ಬೇರೆಯಾಗಿದ್ದು, ಈ ಬಗ್ಗೆ ಸಾಕ್ಷಿ 2 ರವರನ್ನು ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿಯು ಅವರಿಗೂ ನನಗೂ ವ್ಯವಹಾರ ಇಲ್ಲ ಎಂದು ನುಡಿಯುತ್ತಾರೆ.

15. ದಿಃ22.08.2022 ರಂದು ನಿತಿನ್ ರಾಜ್ ಅಲಿಯಾಸ್ ಅರ್ಜುನ್ ರವರು ವಾದಿಯ ಮನೆಗೆ ಒಂದೇ ಬಾರಿ ಬಂದಿರುತ್ತಾರೆ. ಚೆಕ್ಕು ಮತ್ತು ಬಾಂಡ್ ಗಳನ್ನು ವಾದಿಗೆ ಕೊಟ್ಟ ವಿಚಾರ ನಿತಿನ್ ರಾಜ್ ಅಲಿಯಾಸ್ ಅರ್ಜುನ್ ರವರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನಾನೇ ವಾದಿಯ ಜೊತೆ ನೇರವಾಗಿ ವ್ಯವಹಾರ ಮಾಡಿರುತ್ತೇನೆಂದರೆ ಸುಳ್ಳು. ವಾದಿಯ ಮಗಳಿಗೆ ಮೌಂಟ್ ಕಾರ್ಮಲ್ ಕಾಲೇಜಿನಲ್ಲಿ ಸೀಟು ಕೊಡಿಸಿದಾಗಿನಿಂದಲೂ 2000ನೇ ಇಸವಿಯ ಮೊದಲಿನಿಂದಲೂ ವಾದಿ ಪರಿಚಯ ಎಂದರೆ ಸುಳ್ಳು. ನಿಪಿ-1 ಮತ್ತು 6 ಅನ್ನು ನಾನೇ ತೆಗೆದುಕೊಂಡು ಬಂದು ಬರವಣಿಗೆ ಮಾಡಿಸಿರುತ್ತೇನೆಂದರೆ ಸುಳ್ಳು. ವಾದಿಯಿಂದ ಸಾಲ ಪಡೆದು, ಸೈಟನ್ನು ಮಾರಾಟ ಮಾಡುವುದಾಗಿ ತಿಳಿಸಿ, ಹಣ ಪಡೆದು, ಜವಬ್ದಾರಿಯಿಂದ ತಪ್ಪಿ ಸಿಕೊಳ್ಳಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸುಳ್ಳು.

**<u>ಮರುವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**